ಮಾಡಬೇಕು.

ಶ್ರೀ ತಿಪ್ಪೇಸ್ವಾಮಿ: ಆದಷ್ಟು ಪ್ರಯತ್ನ ಮಾಡುತ್ತೇನೆ.

ವಿಷಯ: ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿನ ಪೊಲೀಸ್ ವಸತಿ ಗೃಹಗಳ ದುರಸ್ಥಿ.

532 (3371)

ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ವಸತಿ ಗೃಹಗಳ ಸಂಖ್ಯೆ ಎಷ್ಟು?

ಆ) ವಸತಿ ಗೃಹಗಳ ದುರಸ್ತಿ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಯಾವಾಗ ದುರಸ್ತಿ ಕಾರ್ಯ ಮಾಡಲಾಗುವುದು?

ಇ) ವಸತಿಗೃಹಗಳ ದುರಸ್ತಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 646.

ಆ) ಕೆಲವು ವಸತಿ ಗೃಹಗಳು ತುರ್ತಾಗಿ ದುರಸ್ತಿ ಆಗಬೇಕಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಂಬಂಧದಲ್ಲಿ ಕಾರ್ಯಪಾಲಕ ಅಭಿಯಂತರರು, ನಂ.2, ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರುರವರು 16.72 ಲಕ್ಷ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿರುತ್ತಾರೆ. ವಸತಿ ಗೃಹಗಳ ದುರಸ್ತಿಯ ಕಾರ್ಯವನ್ನು ಆದ್ಯತೆಯ ಮೇರೆಗೆ ಹಣಕಾಸಿನ ಸೌಲಭ್ಯವನ್ನು ನೋಡಿಕೊಂಡು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು.

ಇ) ಹೌದು.

ಶ್ರೀಮತಿ ಡಿ.ಜಿ.ಹೇಮಾವತಿ: ಮಾನ್ಯ ಅಧ್ಯಕ್ಷರೆ, ಪೊಲೀಸ್ ವಸತಿ ಗೃಹಗಳಿಗೆ 16.72 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ದುರಸ್ತಿ ಮಾಡುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅವರಿಗೆ ಸರಿಯಾಗಿ ರಸ್ತೆಗಳಿಲ್ಲ, ಕುಡಿಯುವ ನೀರಿಲ್ಲ; ಆದ್ದರಿಂದ ತಾವು ಇನ್ನೂ ಐವತ್ತು ಲಕ್ಷ ಹೆಚ್ಚು ಹಣವನ್ನು ಕೊಟ್ಟು ಆ ವಸತಿಗೃಹಗಳನ್ನು ದುರಸ್ತಿ ಮಾಡಿಕೊಡಬೇಕು. ಮೂರು ತಿಂಗಳ ಹಿಂದೆ ಪೊಲೀಸ್‌ನವರಿಗೆ ಉಳಿತವಾಗಿ ಪಡಿತರ ಪದಾರ್ಥಗಳನ್ನು

ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಇದರ ಬಗ್ಗೆ ಸಚಿವರು ಉತ್ತರ ಕೊಡಬೇಕಾಗಿ ವಿನಂತಿಸುವೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಅವರು ಹೆಚ್ಚು ಫಂಡ್‌ನ್ನು ಪೊಲೀಸ್ ವಸತಿ ಗೃಹಗಳ ದುರಸ್ತಿಗೆ ಕೊಡಬೇಕಾಗಿ ಹೇಳಿದ್ದಾರೆ. ಈ ವರ್ಷ ಅಂದರೆ 1997-98ರಲ್ಲಿ 3.67 ಕೋಟಿ ಹಣವನ್ನು ಕಟ್ಟಡಗಳ ದುರಸ್ತಿ ಮತ್ತು ಮೈನ್‌ಟೆನೆನ್ಸ್‌ಗೆ ಬಿಡುಗಡೆ ಮಾಡಿದ್ದೇವೆ. ಅವರು ಇತರೆ ವಿಚಾರವೇನು ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ವಿಷಯ: ಶಿವಮೊಗ್ಗ ನಗರದಲ್ಲಿ ಆಲ್ಕೊಳದಲ್ಲಿ ಕೆ.ಇ.ಬಿ.ಸಬ್‌ಸ್ಟೇಷನ್

533 (4113)

ಶ್ರೀ ಅಯನೂರ್ ಮಂಜುನಾಥ್ (ಹೊಸನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಆಲ್ಕೊಳದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಬ್ ಸ್ಟೇಷನ್ ಯಾವಾಗ ಮಂಜೂರಾಯಿತು?. ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಸಬ್ ಸ್ಟೇಷನ್ ಸಾಮರ್ಥ್ಯ ಎಷ್ಟು ಅದಕ್ಕೆ ತಗಲುವ ವೆಚ್ಚ ಎಷ್ಟು? (ವಿವರಗಳನ್ನೊಳಗೊಂಡ ಮಾಹಿತಿ ನೀಡುವುದು)

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಶಿವಮೊಗ್ಗ ನಗರದಲ್ಲಿನ ಆಲ್ಕೊಳ ಸಬ್ ಸ್ಟೇಷನ್ ಯು.ಡಿ.ಐ.ಎಸ್. ಯೋಜನೆಯಲ್ಲಿ (ಎ.ಡಿ.ಬಿ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಯಿಂದ 21-3-93ರಲ್ಲಿ ಮಂಜೂರಾಗಿದೆ. ಸದರಿ ಕಾಮಗಾರಿಯ ಪ್ರಗತಿಯು ಈ ಕೆಳಕಂಡಂತಿದೆ.

1. **110 ಕೆ.ವಿ.ಲೈನಿನ ಕೆಲಸ:** 1 ಕಿ.ಮೀ.ಮಾರ್ಗದ ಕೆಲಸ ಈಗಾಗಲೇ ಶುರುವಾಗಿದೆ. ಸ್ಪಬ್‌ಗಳನ್ನು ಹಾಕಿ, ಕಾಂಕ್ರೀಟ್ ಮಾಡಲಾಗಿದೆ.

2. **110 ಕೆ.ವಿ.ಸಬ್ ಸ್ಟೇಷನ್ ಕೆಲಸ:**

   ಅ) ಕಂಟ್ರೋಲ್ ರೂಮಿನ ಕೆಲಸ ಮುಗಿದಿದೆ.

   ಆ) ಸ್ಟೇಷನ್ ಕೆಲಸವೂ ಮುಗಿದಿದೆ-ಕಂಟ್ರೋಲ್ ಕೇಬಲ್ ಹಾಕುವ ಕೆಲಸ